ಓ.ಎಸ್.238/2011 ಡಿ.ಡಬ್ಲೂ-1

ವಿಠ್ಠಲದಾಸ ತಂದೆ ಲಕ್ಷ್ಮಿದಾಸಪ್ಪ ದಾಸರ

ದಿ.27-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಮುಂದುವರೆದ ಮುಖ್ಯ ವಿಚಾರಣೆ : 3, 6(ಬಿ), (ಸಿ) ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಪಿ.ಎಸ್.ಜೆ ರವರಿಂದ :-***

ದಿನಾಂಕ:19-09-2016 ರಂದು ಆದೇಶಿಸಲಾದ ಆರ್.ಆರ್.ಟಿ/ಅಪೀಲ್/148/2012-13 ರ ದೃಢಿಕೃತ ನಕಲಿನ ಪ್ರತಿಯನ್ನು ನಿಡಿ-21 ಎಂದು, ದಿನಾಂಕ:06-07-2013 ರ ದೃಢಿಕರಣ ಪತ್ರವನ್ನು ನಿಡಿ-22 ಎಂದು, ದಿನಾಂಕ:11-02-2014 ರಂದು ಆದೇಶಿಸಲಾದ ರಿವಿಜನ್ ಪೆಟಿಶನ್ ಸಂ:3/2013-14 ರ ದೃಢಿಕೃತ ನಕಲಿಯನ ಪ್ರತಿಯನ್ನು ನಿಡಿ-23 ಎಂದು, ದಿ:18-01-2012 ರಂದು ಆದೇಶಿಸಲಾದ ಹಕ್ಕು ದಾಖಲೆ ಸಂ: ಹೆಚ್-81 ರ ಪ್ರತಿಯನ್ನು ನಿಡಿ-24 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ವಾದಿಯರ ಪರ ವಕೀಲರಾದ ಶ್ರೀ ಕೆ.ಸಿ.ಎಸ್ ರವರಿಂದ**

ರಮೇಶ ಮತ್ತು ಪದ್ಮಾವತಿ ಯಾವಾಗ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ರಮೇಶರವರು 2016-17 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ಪದ್ಮಾವತಿ ರವರು ಯಾವಾಗ ಮೃತಪಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ರಮೇಶ ಮತ್ತು ಪದ್ಮಾವತಿ ಜಿಲ್ಲಾಧಿಕಾರಿ ಕಚೇರಿಗೆ ಹೋಗಿದ್ದರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ರಮೇಶ ಮತ್ತು ಪದ್ಮಾವತಿ ರವರು ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಹಾಜರಾಗಿರುವುದಿಲ್ಲ ಎಂದರೆ ಸರಿ . ಪದ್ಮಾವತಿ ರವರು ಜಿಲ್ಲಾಧಿಕಾರಿ ಕಚೇರಿಗೆ ಹೋಗಿರುವುದಿಲ್ಲ ಮತ್ತು ಅವರು ನಿಡಿ-23 ರ ಅರ್ಜಿ ಸಲ್ಲಿಸುವುದರ ಸಂದರ್ಭದಲ್ಲಿ ಜೀವಂತ ಇರುವುದಿಲ್ಲ ಎಂದರೆ ಸರಿ . ಜಿಲ್ಲಾಧಿಕಾರಿ ಕಚೇರಿಯಲ್ಲಿ ನಿಡಿ-23 ರಂತೆ ಆದೇಶವಾದ ನಂತರ ರಮೇಶ ಇತನು ಉಪವಿಭಾಗಾಧಿಕಾರಿ ಕಚೇರಿಗೆ ಬಂದು ಹಾಜರಾಗಿರುವುದಿಲ್ಲ ಎಂದರೆ ಸರಿ. ರಮೇಶ ಮತ್ತು ಪದ್ಮಾವತಿ ರವರು ಶ್ಯಾಮಸುಂದರವರಿಗೆ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸಾಕ್ಷಿಯು ಮಗ ಮತ್ತು ತಾಯಿಯಾಗಬೇಕೆಂದು ನುಡಿಯುತ್ತಾರೆ. ನಿಡಿ-22 ದೃಢಿಕರಣ ಪತ್ರದ ಮೂಲ ಪ್ರತಿ ನಿಮ್ಮ

ಬಳಿ ಇರುವುದಿಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ-22 ನ್ನು ತಯಾರಿಸಿಕೊಂಡು ಬಂದಿರುತ್ತಿರಿ ಎಂದರೆ ಸಾಕ್ಷಿಯು ಕಚೇರಿಯವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-22 ನ್ನು ಸುಳ್ಳು ಎಂದರೆ ಸರಿಯಲ್ಲ.

## <u>ಪಾಟೀ ಸವಾಲು : 7ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಹೆಚ್.ಎಸ್ ರವರಿಂದ</u>

ನೀವು ತಹಶೀಲ್ದಾರ ಕಚೇರಿ ಹಾಗೂ ಸರ್ವೆ ಇಲಾಖೆಯಲ್ಲಿ ಕೆಲಸ ಮಾಡಿರುತ್ತಿರಿ ಎಂದರೆ ಸರಿ. ಈಗ ನೀವು ನಿವೃತ್ತಿ ಹೊಂದಿರುತ್ತಿರಿ ಎಂದರೆ ಸರಿ. ನಿಮಗೆ ಯಾವುದಾದರೂ ದಾಖಲೆ ತೋರಿಸಿದರೆ ಓದಲು ಬರುತ್ತದೆ ಎಂದರೆ ಸರಿ. ೧, ೨ನೇ  ವಾದಿ ಹಾಗೂ ೫ನೇ ಪ್ರತಿವಾದಿರವರು ಸಂಪೂರ್ಣವಾಗಿ ದಾವಾ ಜಮೀನುಗಳನ್ನು ಮಾರಾಟ ಮಾಡಿದ ವಿಷಯ ನಿಮಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದಿಂದ ಪಹಣಿ ಬಂದ ಮೇಲೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.  ಸದರಿ ಪಹಣಿ ಪತ್ರಿಕೆಗಳು ಯಾರ ಹೆಸರಿಗೆ ಇದ್ದವು ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ೧ ಹಾಗೂ ೨ನೇ ವಾದಿ ಮತ್ತು ೫ನೇ ಪ್ರತಿವಾದಿಯವರು ನಿಮಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಯಾರು ಮತ್ತು ಎಷ್ಟು ಜನ ಪಕ್ಷಗಾರರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-೪ನ್ನು ಏನು ಬರೆದಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಮುಂದುವರೆದು ಕನ್ನಡಕ ಇರದ ಕಾರಣ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ೨೦೨೩ ರಲ್ಲಿ ೨ನೇ ವಾದಿ ೭ನೇ ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಟ್ಟಿರುತ್ತಾನೆ ಎಂದರೆ  ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದರಂತೆ ೧ನೇ ವಾದಿ ೭ನೇ ಪ್ರತಿವಾದಿಗೆ ೨೦೨೩ ನೇ ಸಾಲಿನಲ್ಲಿ ಖರೀದಿ ಪತ್ರ ಬರೆದುಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದರಂತೆ ೫ನೇ ಪ್ರತಿವಾದಿಯು ಕೂಡ ೭ನೇ ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ೩ ಖರೀದಿ ಪತ್ರಗಳನ್ನು ನಿಡಿ-೪ ರಿಂದ ೬, ೭ನೇ ಪ್ರತಿವಾದಿಗೆ ಬರೆದುಕೊಟ್ಟ ವಿಷಯ ನಿಮಗೆ ಗೊತ್ತಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ಜಮೀನುಗಳು ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಜಗಳವಿದ್ದ ಕಾರಣ ಬೀಳು ಬಿದ್ದಿರುತ್ತವೆ ಎಂದು ನುಡಿಯುತ್ತಾರೆ. ೭ನೇ ಪ್ರತಿವಾದಿ ೩ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದ ಬಗ್ಗೆ ನಿಮಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನಿನ ಪಕ್ಕದಲ್ಲಿಯೇ ನನ್ನ ಜಮೀನು ಇದೆ ಎಂದು ನುಡಿಯುತ್ತಾರೆ. ನಿಮ್ಮ  ಜಮೀನಿನ ಸರ್ವೆ ನಂಬರ ಏನೆಂದರೆ ಸಾಕ್ಷಿಯು ಸ.ನಂ:

൪൪൩/൨/൫ ಎಂದು ನುಡಿಯುತ್ತಾರೆ. ನಿಮ್ಮ ಜಮೀನಿನ ಪಕ್ಕಕ್ಕೆ ಯಾವ ಸರ್ವೆ ನಂಬರ ಇದೆ ಎಂದರೆ ಸಾಕ್ಷಿಯು ൪൪൩/൫ ಎಂದು ನುಡಿಯುತ್ತಾರೆ. ಅದರಂತೆ ಸರ್ವೆ ನಂಬರ ൪൪൩/൨ ಹಿಸ್ಸಾ-൧ ನ್ನು ಜಮೀನು ನಿಮ್ಮ ಜಮೀನಿನ ಪಕ್ಕದಲ್ಲಿಯೇ ಬರುತ್ತದೆ ಎಂದರೆ ಸಾಕ್ಷಿಯು ಒಂದು ಹೊಲ ಬಿಟ್ಟು ಬರುತ್ತದೆ ಎಂದು ನುಡಿಯುತ್ತಾರೆ.

ಅದರಂತೆ ಸರ್ವೆ ನಂಬರ : ൪൪൩/൨ ಹಿಸ್ಸಾ-൯ ಇದು ಸರ್ವೆ ನಂಬರ ൪൪൩/൨ ಹಿಸ್ಸಾ-൧ ರ ಪಕ್ಕದಲ್ಲಿಯೆ ಬರುತ್ತದೆ ಎಂದರೆ ಸರಿ. ಅದರಂತೆ ಸರ್ವೆ ನಂಬರ ൪൪൩/൨ ಹಿಸ್ಸಾ-൫ ಇದು ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ನನ್ನ ಜಮೀನಿನ ಪಕ್ಕದಲ್ಲಿಯೇ ಬರುತ್ತದೆ ಮತ್ತು ಅದೇ ಸರ್ವೆ ನಂಬರನಲ್ಲಿ ನಾನು ಇರುತ್ತೇನೆ ಎಂದು ನುಡಿಯುತ್ತಾರೆ. ೭ನೇ ಪ್ರತಿವಾದಿ ಖರೀದಿಸಿದ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.